ತಿಳಿಸಿದೆ.

ಪದವಿಪೂರ್ವ ಕಾಲೇಜಿನ ಪ್ರಾಧ್ಯಾಪಕರ ವೇತನ ವ್ಯತ್ಯಾಸ

1419 (2020)

ಶ್ರೀ ಕುಂಬ್ಳೆ ಸುಂದರರಾವ್ (ಸುರತ್‌ಕಲ್): ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಪದವಿಪೂರ್ವ ಕಾಲೇಜಿನ ಮತ್ತು ಪದವಿ ಕಾಲೇಜಿನ ಪ್ರಾಧ್ಯಾಪಕರುಗಳ ವೇತನದಲ್ಲಿ ವ್ಯತ್ಯಾಸವಿರುವುದು ನಿಜವೇ; ಹಾಗಿದ್ದಲ್ಲಿ ಇರುವ ವ್ಯತ್ಯಾಸವೇನು;

ಆ. ಈ ತಾರತಮ್ಯಕ್ಕೆ ಕಾರಣವೇನು; ಇದನ್ನು ಸರಿಪಡಿಸಲು ಇರುವ ತೊಂದರೆಗಳೇನು;

ಇ. ಪದವಿಪೂರ್ವ ಕಾಲೇಜಿನ ಪ್ರಾಧ್ಯಾಪಕರಿಗೂ ಪದವಿಕಾಲೇಜಿನಲ್ಲಿ ಪದವಿಪೂರ್ವ ತರಗತಿಗೆ ಪ್ರಾಧ್ಯಾಪಕರುಗಳಿಗೂ ಸಮಾನವೇತನ ಜಾರಿಯಲ್ಲಿದೆಯೇ; ಇಲ್ಲದಿದ್ದರೆ ಕಾರಣವೇನು;

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):

ಅ. ನಿಜ. ಪದವಿಪೂರ್ವ ಕಾಲೇಜಿನ ಉಪನ್ಯಾಸಕರು ರಾಜ್ಯ ವೇತನಶ್ರೇಣಿಯನ್ನು ಹಾಗೂ ಪದವಿ ಕಾಲೇಜಿನ ಉಪನ್ಯಾಸಕರು ಯುಜಿಸಿ ವೇತನವನ್ನು ಪಡೆಯುತ್ತಿದ್ದಾರೆ.

ಆ. ಪದವಿಪೂರ್ವ ಕಾಲೇಜಿನ ಉಪನ್ಯಾಸಕರುಗಳು ಯುಜಿಸಿ ವೇತನದ ವ್ಯಾಪ್ತಿಗೆ ಬರುವುದಿಲ್ಲವಾದ್ದರಿಂದ ತಾರತಮ್ಯದ ಪ್ರಶ್ನೆ ಉದ್ಭವಿಸುವುದಿಲ್ಲ.

ಇ. ಇಲ್ಲ, ಪದವಿಪೂರ್ವ ಕಾಲೇಜಿನ ಉಪನ್ಯಾಸಕರುಗಳು ಯುಜಿಸಿ ವೇತನವ್ಯಾಪ್ತಿಗೆ ಬರುವುದಿಲ್ಲವಾದ್ದರಿಂದ ಇವರಿಗೆ ಯುಜಿಸಿ ವೇತನಶ್ರೇಣಿ ನೀಡಿಲ್ಲ.

ಸುರತ್ಕಲ್ ಕ್ಷೇತ್ರದ ಗ್ರಾಮಾಂತರ ಪ್ರದೇಶದಲ್ಲಿ ಶೌಚಾಲಯಗಳಿಗೆ ಅನುದಾನ.

1420 (2021)

ಶ್ರೀ ಕುಂಬ್ಳೆ ಸುಂದರರಾವ್ (ಸುರತ್‌ಕಲ್): ಮಾನ್ಯ ಗ್ರಾಮೀಣಾಭಿವೃದ್ಧಿ

ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುರತ್ಕಲ್ ವಿಧಾನಸಭಾ ಕ್ಷೇತ್ರದಲ್ಲಿನ 10 ಗ್ರಾಮಪಂಚಾಯತ್‌ಗಳಲ್ಲಿ 1996-97ನೇ ಸಾಲಿನಿಂದ ಶೌಚಾಲಯಗಳಿಗೆ ಬಿಡುಗಡೆಯಾದ ಮೊತ್ತವೆಷ್ಟು? ನಿರ್ಮಾಣವಾದ ಶೌಚಾಲಯಗಳ ಸಂಖ್ಯೆ ಎಷ್ಟು?

ಆ) ಶೌಚಾಲಯದ ಪ್ರಯೋಜನ ಪಡೆದವರಲ್ಲಿ ಬಡತನ ರೇಖೆಗಿಂತ ಮೇಲ್ಪಟ್ಟವರ ಸಂಖ್ಯೆ ಎಷ್ಟು? ಹಾಗೂ ಕೆಳಗಿನವರ ಸಂಖ್ಯೆ ಎಷ್ಟು?

ಇ) ಹಣ ಪಾವತಿಯಾಗದೇ ಇರುವ ಶೌಚಾಲಯಗಳ ಸಂಖ್ಯೆ ಎಷ್ಟು?

ಈ): ಹಣ ಪಾವತಿ ಆಗದಿರುವುದಕ್ಕೆ ಕಾರಣವೇನು? ಎಂದು ಹಣ ಪಾವತಿ ಮಾಡಲಾಗುವುದು?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

ಅ) ನಿರ್ಮಲಗ್ರಾಮ ಯೋಜನೆಯಡಿ ಸುರತ್ಕಲ್ ವಿಧಾನಸಭಾ ಕ್ಷೇತ್ರದ 10 ಗ್ರಾಮಪಂಚಾಯತ್‌ಗಳಿಗೆ 1996-97ನೇ ಸಾಲಿನಿಂದ ಬಿಡುಗಡೆಯಾದ ಅನುದಾನ ಮತ್ತು ನಿರ್ಮಿಸಲಾದ ಶೌಚಾಲಯಗಳ ವಿವರ ಈ ಕೆಳಕಂಡಂತಿದೆ.

ವರ್ಷ	ಬಿಡುಗಡೆಯಾದ ಅನುದಾನ (ರೂ. ಲಕ್ಷಗಳಲ್ಲಿ)	ನಿರ್ಮಿಸಲಾದ ಶೌಚಾಲಯಗಳು (ಸಂಖ್ಯೆ)
96-97	4.66	70
97-98	8.75	79
98-99	3.44	34
ಒಟ್ಟು	16.85	183

ಆ) ಫಲಾನುಭವಿಗಳ ವಿವರ ಈ ಕೆಳಕಂಡಂತಿದೆ:

ವರ್ಷ	ಬಡತನ ರೇಖೆಗಿಂತ ಮೇಲಿರುವ ಕುಟುಂಬಗಳ ಸಂಖ್ಯೆ	ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಸಂಖ್ಯೆ
96-97	24	46
97-98	36	43
98-99	07	27
ಒಟ್ಟು	67	116

ಇ) ಪ್ರಗತಿಯಲ್ಲಿರುವ 964 ಶೌಚಾಲಯಗಳು ಪೂರ್ಣಗೊಂಡ ನಂತರ ಸಹಾಯಧನ ನೀಡಬೇಕಾಗಿರುತ್ತದೆ. ಅವುಗಳ ವಿವರ ಈ ಕೆಳಕಂಡಂತಿದೆ:

ವರ್ಷ	ಬಡತನ ರೇಖೆಗಿಂತ ಮೇಲಿರುವ ಕುಟುಂಬಗಳು ನಿರ್ಮಿಸುತ್ತಿರುವ ಶೌಚಾಲಯಗಳ ಸಂಖ್ಯೆ	ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳು ನಿರ್ಮಿಸುತ್ತಿರುವ ಶೌಚಾಲಯಗಳ ಸಂಖ್ಯೆ
96-97	104	144
97-98	202	314
98-99	87	113
ಒಟ್ಟು	393	571

ಈ) ಶೌಚಾಲಯಗಳು ಇನ್ನೂ ಅಪೂರ್ಣ ಸ್ಥಿತಿಯಲ್ಲಿರುವ ಕಾರಣ ಸಹಾಯಧನ ನೀಡಿರುವುದಿಲ್ಲ. ಪೂರ್ಣಗೊಂಡ ನಂತರ ನೀಡಲಾಗುವುದು.

ಟ್ರೈಸಂ ಯೋಜನೆ.

1421 (2022)

ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್): ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?